ಮುಖವನ್ನೂ ಒತ್ತಿ ಒರೆಸುತ್ತಿದ್ದಳು. ಆಕೆಯ ಮುಖವು ಒಬ್ಬ ರೋಗಿಯದೆಂಬಂತೆ ಸೊರಗಿತ್ತು. ಆಕೆ ತಟ್ಟೆಯಲ್ಲಿ ಎಲ್ಲ ಬಡಿಸಿದ ನಂತರ ಆರಾಮ ಕುರ್ಚಿಯ ಬಳಿ ಹೋಗಿ ಮೆಲ್ಲನೆ ಹೇಳಿದರು. 'ಈ ಮಳೆಗಾಳಿಯಲ್ಲಿ ಏಕೆ ಹೊರಗೆ ಕುಳಿತಿದ್ದೀರಿ? ನಾನು ಬಡಿಸಿದ್ದೇನೆ. ಸ್ವಲ್ಪ ಊಟ ಮಾಡಿ. ಹಾಸಿಗೆಯನ್ನೂ ಹಾಸಿದ್ದೇನೆ. ಆಮೇಲೆ ಹೋಗಿ ಮಲಗಿ, ನಾವು ಮಾಡಿದ್ದನ್ನೆಲ್ಲಾ ಕ್ಷಮಿಸಿ ಬಿಡಿ. ನಾನು ಹೇಳಿದ ಮಾತು ಕೇಳುವುದಿಲ್ಲವೇ?'

ಅಪ್ಪ ತಟ್ಟೆಂದು ಹೇಳಿದರು, 'ನನಗೆ ಹಸಿವಿಲ್ಲ'.

'ಮಧ್ಯಾಹ್ನ ಒಂದು ಹಿಡಿ ಅನ್ನ ತಿಂದಿದ್ದಲ್ಲವೇ? ಸಾಯಂಕಾಲ ಟೀನೂ ಕುಡಿಯಲಿಲ್ಲ.'

'ನನಗೆ ಊಟ ಬೇಡ. ರವಿಯ ಊಟ ಆಯಿತೇ? ಇಲ್ಲದಿದ್ದರೆ ಅವನಿಗೆ ಊಟ ಮಾಡಲು ಹೇಳು.'

ರವಿ ಸಾಯಂಕಾಲ ಆಫೀಸಿನಿಂದ ತಂದಿದ್ದ ಕಾಗದಗಳ ಮುಂದೆ ಕುಳಿತಿದ್ದ. ಅಮ್ಮ ಅಪ್ಪಾವ್ರೊಂದಿಗೆ ಹೇಳಿದರು, 'ನೀವು ಮಾಡದೆ ಅವನು ಊಟ ಮಾಡುತ್ತಾನೇನು? ನಿಮಗಾಗಿ ಕಾದಿದ್ದಾನೆ.'

'ರವಿ' ಅಪ್ಪ ಕರೆದರು. ಅವನು ತನ್ನ ರೂಮಿನ ಬಾಗಿಲ ಬಳಿ ಬಂದು ನಿಂತನು.

ಅವರು ಮತ್ತೆ ಹೇಳಿದರು, 'ನೀನು ಊಟ ಮಾಡು. ನನಗೋಸ್ಕರ ಕಾಯಬೇಡ. ನನ್ನ ಹಣೆ ಬರಹವೇ ಇಷ್ಟು. ಏನು ಮಾಡುವುದು'. ಉತ್ತರ ಕೊಡದ ಅವನ ಮುಖವನ್ನು ನೋಡಿ ಅವರು ಮತ್ತೆ ಹೇಳಿದರು, 'ಯಾಕೆ ಸುಮ್ಮನೆ ನಿಂತಿದ್ದೀ? ಅನ್ನ ತಣ್ಣಗಾಗಿ ಹೋಗುತ್ತೆ. ಉಂ, ಊಟ ಮಾಡು'.

ಆಗ ಅಮ್ಮ ಅಪ್ಪನನ್ನು ಕೇಳಿದರು, 'ನೀವು ಸ್ವಲ್ಪವೂ ಊಟ ಮಾಡುವುದಿಲ್ಲವೇ?'

'ನನಗೋಸ್ಕರ ಕಾಯಬೇಡಿರೆಂದು ಹೇಳಲಿಲ್ಲವೇ? ನಾನು ಯಾವಾಗಲಾದರೂ ತಿಂದುಕೊಳ್ಳುತ್ತೇನೆ. ನೀವು ಊಟ ಮಾಡಿ.'

ರವಿಯೂ ಅಮ್ಮನೂ ಊಟ ಮಾಡಲು ಹೋಗಲಿಲ್ಲ. ಮಳೆ ಒಂದೇ ಸಮನೆ ಬೀಳುತ್ತಿತ್ತು. ತಣ್ಣಗೆ ಗಾಳಿ ಬೀಸುತ್ತಲೇ ಇತ್ತು. ಆಕಾಶದಲ್ಲಿ ಮಿಂಚು ಹೊಡೆಯುತ್ತಲೇ ಇತ್ತು. ವರಾಂಡದೊಳಕ್ಕೆಲ್ಲಾ ಇರಿಚಲು ಹೊಡೆಯುತ್ತಿತ್ತು.

ಅಪ್ಪಾವ್ರು ಹೇಳಿದರು, 'ಮಳೆ ಗಾಳಿ ಹೆಚ್ಚುತ್ತಿದೆ. ನೀವು ಹೋಗಿ ಊಟ ಮಾಡಿ ಬಾಗಿಲು ಹಾಕಿಕೊಂಡು ಮಲಗಿ'.

'ಉಪವಾಸವಿದ್ದು, ಈ ಮಳೆ ಗಾಳಿಯಲ್ಲಿ ಹೊರಗೇ ಕುಳಿತು ಏನಾದರೂ ಅನಾರೋಗ್ಯ ತಂದುಕೊಳ್ಳಬೇಕೆ? ಯಾಕೆ ಎಲ್ಲರನ್ನೂ ಗೋಳು ಹುಯ್ದುಕೊಳ್ಳುತ್ತೀರಿ?'

'ನನ್ನನ್ನು ನೀವು ಗೋಳು ಹುಯ್ದುಕೊಳ್ಳುತ್ತಿದ್ದೀರಿ ಅಷ್ಟೆ. ಮಳೆಯಲ್ಲಿ ಗಾಳಿಯಲ್ಲಿ ಇದ್ದು ನನಗೆ ಅಭ್ಯಾಸವಿದೆ. ನನಗೆ ಯಾವ ಕಾಯಿಲೆಯೂ ಬರುವುದಿಲ್ಲ. ಬಂದರೂ ಅದರಿಂದ ಏನೂ ಯಾರಿಗೂ ತೊಂದರೆಯೂ ಆಗುವುದಿಲ್ಲ.'

'ನೀವು ಊಟ ಮಾಡದೆ ಇದ್ದರೆ ಹೋಗಲಿ. ಒಳಗೆ ಬಂದು ಮಲಗಬಾರದೆ?' ಅಮ್ಮ ಅಪ್ಪಾವ್ರ ಮುಖವನ್ನೇ ದಿಟ್ಟಿಸುತ್ತಾ ಹೇಳಿದರು.

'ನಾನೇನಾದರೂ ಹೇಳಿದರೆ ಅದನ್ನು ಅನುಸರಿಸಬಾರದೆಂಬ ಹಟವೇಕೆ ನಿಮಗೆ?' ಅಪ್ಪಾವ್ರು ಮುಖವನ್ನು ಆ ಕಡೆಗೆ ತಿರುಗಿಸಿಕೊಂಡು ಹೇಳಿದರು, 'ನಾನು ಉಪವಾಸವಾದರೂ ಇರುತ್ತೇನೆ. ಮಳೆಗಾಳಿಯಲ್ಲಿ ನೆನೆಯುತ್ತೇನೆ. ಆದರೆ ನೀವು ನಾನು ಹೇಳುವುದನ್ನು ಕೇಳುತ್ತೀರೋ ಇಲ್ಲವೋ?'

'ನೀವು ಹೇಳಿದ್ದನ್ನೆಲ್ಲಾ ಕೇಳುತ್ತಲೇ ಇಲ್ಲವೇ ನಾವು.'

'ಹಾಗಾದರೆ ನೀವು ಒಳ ಹೋಗಿ ದೀಪ ಆರಿಸಿ ಮಲಗಿ, ನನ್ನ ಬಗ್ಗೆ ಹೆಚ್ಚು ಆಲೋಚಿಸಬೇಡಿ. ಇದೆಲ್ಲಾ ನನ್ನ ಹಣೆಬರಹ. ನನಗಾಗಿ ನೀವು ಹೆಚ್ಚು ಕಾಲ ಕಷ್ಟಪಡಬೇಕಾಗಿ ಬರುವುದಿಲ್ಲ. ಹೆಚ್ಚೆಂದರೆ ಐದೋ ಆರೋ ತಿಂಗಳು ಅಷ್ಟೆ. ಅಲ್ಲಿಯತನಕ ಗಂಜಿ, ಚುಟ್ಟ ಕೊಡಬೇಕಾಗುತ್ತೆ ಅಷ್ಟೆ. ಅನಂತರ